ತುಮಕೂರು ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮ್ಮಿಷನರವರ ಕೋರ್ಟಿನಿಂದ.

ತಾರೀಖು 6ನೇ ಜೂ೯ 1884.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ, ಡಿಸ್ಟ್ರಿಕ್ಟ್ ಮಜಕೂರ್ ಮದ್ದಗಿರಿ, ಪಾವಗಡ, ಶಿರಾ, ಗುಬ್ಬಿ ಈ ತಾಲ್ಲೂಕುಗಳಲ್ಲಿ 1884—85ನೇ ತಾರಣಸಂವತ್ಸರದಲ್ಲಿ ಸರ್ಕಾರದ ಜಮೀನಿನಲ್ಲಿ ಕುರಂಗದ ಕಲ್ಲುಗಳನ್ನು ಜಮಾಯಿಸತಕ್ಕ ಹಕ್ಕನ್ನು ಆಯಾಯ ತಾಲ್ಲೂಕು ಆಮಿಲರ ರೂಬರೂ ತಾಲ್ಲೂಕು ಕಚ್ಚೇರಿಯಲ್ಲಿ ಇದರಡೀಲಿ ಕಂಡ ತಾರೀಖುಗಳಲ್ಲಿ ದಿವಿ 11 ಘಂಟೆ ಲಾಗಾಯತು ಹರಾಜು ಮಾಡಲಾಧೀತು.

ಷರತ್ತುಗಳು.

1. ಹರಾಜು ಕೈದಾದಕೂಡ್ಲೆ ಆಕ್ಟೈರ್ ಸವಾಲ್‌ದಾರನು ಶೇಕಡಾ 25 ರೂಪಾಯಿ ವೇರಿಗೆ ನಗದು ಶೇವಣಿಯನ್ನು ಇಡಬೇಕು, ಹರಾಜು ದೀರ್ವಾ ಸಾಹೆಬರಿಂದ ಮಂಜೂರಾದ ವಡನೆ 15 ದಿವಸದಲ್ಲಿ ಪೂರಾ ಮೊಬಲಗನ್ನು ಹಾಜರ್ಮಾಡಬೇಕು, ಹಾಗೆ ಮಾಡದೆ ತಪ್ಪಿದರೆ ಪುನಹಾ ಹರಾಜು ಮಾಡಲ್ಪಟ್ಟು ನಷ್ಟ ಬಂದ ಮೊಬಲಗಿಗೆ ಮೊದಲಿನ ಚಡ ಸವಾಲ್‌ದಾರನನ್ನು ಗುರಿಮಾಡಲಾಧೀತು, ಮತ್ತು ಶೇವಣಿಯನ್ನು ಸರ್ಕಾರಕ್ಕೆ ಶೇರಿಸಿ ಕೊಳ್ಳಲಾಧೀತು.
2. ಕುರಂಗಡ ಕಲ್ಲುಗಳನ್ನು ತೆಗಿಯುವ ಪುದ್ದಿಶ್ಯ ಭೂಮಿ ಸಾಗುವಳಿಗೆ ನಾಲಾಯಖಾಗುವಂತೆ ಮಾಡಕೂಡದು ಗುಂಡಿಗಳನ್ನು, ಇಜಾರದಾರನೇ ಮುಚ್ಚಿಸಬೇಕು.
3. ಹಿಡುವಳಿಯಲ್ಲಿರುವ ಭೂಮಿಯು ಕುರಂಗದ ಕಲ್ಲುಗಳನ್ನು ಹಿಡುವಳಿದಾರನ ಅನುಮತಿ ಪಡದು ತೆಗದುಕೊಳ್ಳಬೇಕು.
4. ಬಂಜರು ಭೂಮಿಗಳನ್ನು ಹುಲ್ಲು ಬನ್ನಿ ಮತ್ತು ಸಾಗುವಳಿಗೆ ಕೊಡಲಾಧೀತು, ಹಾಗೆ ಕೊಡೋಣದರಿಂದ ಕುರಂಗದ ಕಲ್ಲು ಇಜಾರದಾರನಿಗೇನಾದರೂ ನಷ್ಟವಾದರೆ ಅದಕ್ಕೆ ಸರ್ಕಾರದವರು ಜವಾಬ್‌ದಾರರಲ್ಲಾ.
5. ಹರಾಜು ಮೊಬಲಗಿನ ಮೇಲೆ ಶೇಕಡಾ $6\frac{1}{4}$ ರೂಪಾಯಿ ವೇರಿಗೆ ಲೋಕಲ್ ಫಂಡನ್ನು ಕೊಡಬೇಕು.

ಈ ವಿಷಯದಲ್ಲಿ ಮತ್ತೇನಾದರೂ ತಪಸೀಲ್ ತಿಳಿಯಬೇಕಾಗಿದ್ದರೆ ಆಯಾಯ ತಾಲ್ಲೂಕು ಆಮಿಲರಿಗೆ ಬರದು ತಿಳದುಕೊಳ್ಳ ಬಹುದು.

ಹರಾಜು ತಾರೀಖು.

ಮದ್ದಗಿರಿ ತಾಲ್ಲೂಕು 1884ನೇ ಜುಲೈ 15. ಪಾವಗಡ ತಾಲ್ಲೂಕು 1884ನೇ ಜುಲೈ 21.
ಶಿರಾ ತಾಲ್ಲೂಕು ... ಡಿಟೋ 26. ಗುಬ್ಬಿ ತಾಲ್ಲೂಕು .. ಡಿಟೋ 31.

ತಾರೀಖು 17ನೇ ಜೂ೯ 1884.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ತಿಪಟೂರು ಸಬ್ ರಿಜಿಸ್ಟ್ರೀ ಆಫೀಸ್‌ನಲ್ಲಿ ಬೇವಾರಸಾಗಿ ಯಿರತಕ್ಕ ಈ ಕೆಳಗೆ ವಿವರಿಸೋಣಾದ ದಸ್ತೈವಜನ್ನು ಹಾಜರ ಮಾಡಿದವನೇ ಯಾಗಲಿ ಅಥವಾ ವಾಪಸ್ ಪಡಿಯಲಿಕ್ಕೆ ಅವನಿಂದ ಕ್ರಮವಾದ ಅಧಿಕಾರ ಹೊಂದಿದ ಮುತಾಲೀಕ ಯಾ ಹಕ್ಕುದಾರನೇ ಯಾಗಲೀ ಈ ನೋಟೀಸ್ ತಾರೀಖು ಲಗಾಯಿತು ವಂದು ತಿಂಗಳ ವಳಗಾಗಿ ಡಿಟೋ ಸಬ್ ರಿಜಿಸ್ಟ್ರಾರ್ ರೂಬರೂಬ ಹಾಜರಾಗಿ ಅದನ್ನು ವಾಪಸು ತೆಗದುಕೊಳ್ಳಬೇಕು, ಇದಕ್ಕೆ ತಪ್ಪಿದರೆ 1877ನೇ ಇಸವಿ 3ನೇ ನಂಬರ್ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಅನುಸರಿಸಿ ಅದು ನಾಶಪಡಿಸಲ್ಪಡುವದು.

ದಸ್ತಾವೇಜು ನಂಬರ್	ದಸ್ತಾವೇಜು ತಾರೀಖು.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ದಸ್ತಾವೇಜು ರಿಜಿಸ್ಟ್ರಿ ಮಾಡಲ್ಪಟ್ಟ ತಾರೀಖು.	ದಸ್ತಾವೇಜು ಬರದು ಕೊಟ್ಟವರ ಹೆಸರು ಮತ್ತು ವಾಸಸ್ಥಳ	ದಸ್ತಾವೇಜು ಬರಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು
605. 1882—83	1—6—82	5—6—82	5—6—82	ಲಿಂಗದಹಳ್ಳಿ ವೇಲಣಮನೆ ಲಿಂಗಂಣ.	ಹೊನ್ನವಳ್ಳಿ ತಾಲ್ಲೂಕು ಗುರುಗದಹಳ್ಳಿ ಮಲ್ಲಪಟ್ಟ.	45 ರೂಪಾಯಿಗೆ ಲಿಂಗದಹಳ್ಳಿಗಾ ವುದಲ್ಲಿ ಇರುವ ಸರ್ವೆ 49ನೇ ನಂಬರ್ ಬಾಗಾಯತು ಜಮೀನು ಪೈಕೀ ತನ್ನ ಹಿಸ್ಸೆ ಬಾಬತು ಜಮೀನು ಕ್ರಯಕ್ಕೆ ಕೊಟ್ಟರುವದಾಗಿ ವಗ್ಯೆರೆ.

ಮಹಮ್ಮದಲ್ಲಿ,
ಫಾರ್ ರಿಜಿಸ್ಟ್ರಾರ್.